## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.1588/2021

ಸಾಕ್ಷಿದಾರರ ಹೇಳಿಕೆಃ

| | | | |
|---|---|---|---|
| **ಹೆಸರು** | : | ಚಂದ್ರಪ್ಪ | ಚಾಸಾಃ **5** ಪ್ರಾಸಾಃ **7** |
| **ತಂದೆಯ ಹೆಸರು** | : | ನರಸಪ್ಪ | |
| **ವಯಸ್ಸು** | : | **50** ವರ್ಷ | |
| **ವೃತ್ತಿ** | : | ವ್ಯವಸಾಯ | |
| **ವಾಸಸ್ಥಳ** | : | ಹೊಳೆಹರಳಹಳ್ಳಿ ಗ್ರಾಮ | |

ದಿನಾಂಕಃ **12-12-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಚಾಸಾ-1 ನನ್ನ ತಮ್ಮ. ಚಾಸಾ-8 ನನ್ನ ಅಣ್ಣ. ಆರೋಪಿತರು ಗೊತ್ತು. 2021 ನೇ ಸಾಲಿನಲ್ಲಿ ಸಾಯಂಕಾಲ 06-00 ಗಂಟೆ ಸಮಯದಲ್ಲಿ ಆರೋಪಿತರು ನಮ್ಮ ಜೊತೆ ಗಲಾಟೆ ಮಾಡಿರುತ್ತಾರೆ. ಹೊಳೆಹರಳಹಳ್ಳಿ ಗ್ರಾಮದಲ್ಲಿ ನಮಗೆ ಸೇರಿದ ಸರ್ವೆ ನಂ.24/1 ಜಮೀನು ಇದ್ದು ಸದರಿ ಜಮೀನಿನಲ್ಲಿ ಆರೋಪಿತರು ಕಲ್ಲುಗಳನ್ನು ಹಾಕಿದ್ದರು. ಆ ಸಮಯದಲ್ಲಿ ನಾನು ಮತ್ತು ಚಾಸಾ-8 ರವರು ಆರೋಪಿತರಿಗೆ ತಮ್ಮ ಕಲ್ಲುಗಳನ್ನು ತೆಗೆದುಕೊಳ್ಳಿ ಎಂದು ಹೇಳಿದಾಗ ಆರೋಪಿತರು ನಮ್ಮ ಜೊತೆ ಜಗಳ ಮಾಡಿ 1 ನೇ ಆರೋಪಿ ದೊಣ್ಣೆಯಿಂದ ನನ್ನ ಬೆನ್ನಿಗೆ ಮತ್ತು ಸೊಂಟಕ್ಕೆ 1 ನೇ ಆರೋಪಿಯು ಚಾಸಾ-8 ರವರಿಗೆ ತಲೆ ಮತ್ತು ಕಾಲಿಗೆ ದೊಣ್ಣೆಯಿಂದ ಹೊಡೆದು ಮತ್ತು ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ತದನಂತರ ನಾನು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ ಮತ್ತು ಚಾಸಾ-8 ರವರು ಮನೆಯಲ್ಲಿ ದನಕರುಗಳನ್ನು ನೋಡಲು ಯಾರು ಇಲ್ಲದ ಕಾರಣ ಮನೆಯಲ್ಲಿಯೇ ಚಿಕಿತ್ಸೆಯನ್ನು ತೆಗೆದುಕೊಂಡಿರುತ್ತಾರೆ.

ನಮ್ಮ ಜಮೀನಿನಲ್ಲಿ ಒಡ್ಡನ್ನು ಕಟ್ಟಿಸಲು ಇಂಜಿನಿಯರ್ ಬಂದಿದ್ದರು ಆ ಸಮಯದಲ್ಲಿ ಚಾಸಾ-1

ರವರು ಸಹ ಬಂದಿದ್ದರು. ಆರೋಪಿತರು ನನಗೂ ಮತ್ತು ಚಾಸಾ-8 ರವರಿಗೆ ಹೊಡೆಯುತ್ತಿದ್ದಾಗ ಚಾಸಾ-1 ರವರು ಬಿಡಿಸಲು ಬಂದಾಗ 2 ನೇ ಆರೋಪಿ ಕುಡುಗೋಲಿನಿಂದ ಕತ್ತಿಗೆ ಹೊಡೆದರು ಮತ್ತು ಚಾಸಾ-1 ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತಾರೆ. ಪೊಲೀಸರಿಗೆ ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ಮತ್ತು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ಗಲಾಟೆಯು ಸರ್ವೇ ನಂ.25/4 ರಲ್ಲಿ ಆಗಿರುತ್ತದೆ ವಿನಃ ಸರ್ವೇ ನಂ.24/1 ಅಲ್ಲ ಎಂದರೆ ಸರಿ. ಚಾಸಾ-8 ರವರಿಗೆ ಒಳನೋವಾಗಿದ್ದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ಗಲಾಟೆಯ ಸಮಯದಲ್ಲಿ ನಾನು ಚಾಸಾ-1 ಮತ್ತು 8 ರವರು ಇದ್ದೆವು ಎಂದರೆ ಸರಿ. ಆರೋಪಿತರು ನಮಗೆ ಕೆಟ್ಟ ಕೆಟ್ಟ ಪದಗಳಿಂದ ಬೈದಿದ್ದಾರೆ ಎಂದರೆ ಸರಿ.

<u>ಪಾಟೀ ಸವಾಲು :- ಆರೋಪಿತರ ಪರ ವಕೀಲರಿಂದಃ-</u>

ಚಾಸಾ-1 ನನ್ನ ತಮ್ಮ. ಚಾಸಾ-8 ನನ್ನ ಅಣ್ಣ ಮತ್ತು 3 ಜನ ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ನಮ್ಮ ಜಮೀನಿನ ಉತ್ತರ ದಿಕ್ಕಿಗೆ ಆರೋಪಿತರಿಗೆ ಸೇರಿದ ಜಮೀನು ಇರುತ್ತದೆ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ ನಮ್ಮನ್ನು ಮತ್ತು ಆರೋಪಿತರನ್ನು ಹೊರತುಪಡಿಸಿ ನರಸಿಂಹ, ಮಂಜುನಾಥ ಮತ್ತು ಜಗದೀಶರವರು ಇದ್ದರು. ನರಸಿಂಹ, ಮಂಜುನಾಥ ಮತ್ತು ಜಗದೀಶರವರು ಗಲಾಟೆಯ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮೇಲ್ಕಂಡ 3 ಜನರು ಗಲಾಟೆಯ ಸಮಯದಲ್ಲಿ ಇಲ್ಲದಿದ್ದರೂ ಸಹ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ನಮಗೆ ಸೇರಿದ ವಸ್ತುಗಳು ಮತ್ತು ಮು.ಮಾ.1 ಮತ್ತು 2 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ಆರ್ಥಿಕವಾಗಿ ಚನ್ನಾಗಿದ್ದೇವೆ. ನಮ್ಮ ಜಮೀನಿನ ಉತ್ತರ ಭಾಗದಲ್ಲಿರುವ ಆರೋಪಿತರಿಗೆ

ಸೇರಿರುವ ಜಮೀನನ್ನು ಖರೀದಿಸುವ ಉದ್ದೇಶದಿಂದ ಮತ್ತು ಚಾಸಾ-1 ರವರ ಮಾತುಕೇಳಿಕೊಂಡು ಪೊಲೀಸರಿಗೆ ಸುಳ್ಳು ಹೇಳಿಕೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ-1 ಮತ್ತು 8 ರವರು ಬೈಕ್ ನಲ್ಲಿ ಬರುತ್ತಿದ್ದಾಗ ಸ್ವತಃ ಮಾಡಿಕೊಂಡ ಗಾಯಗಳೇ ಹೊರತು ಆರೋಪಿತರು ನಮಗೆ ಯಾವುದೇ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾವೇ ಸ್ವತಃ ಬೈಕ್ ನಿಂದ ಬಿದ್ದು ಗಾಯಗಳನ್ನು ಮಾಡಿಕೊಂಡು ಸುಳ್ಳು ಸಾಕ್ಷಿದಾರರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಕೆಟ್ಟ ಕೆಟ್ಟ ಪದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.